ಥರಾ ಕೇಸೇ!' ಎಂದು ನಕ್ಕ. ಈ ಮೂರ್ತಿಯೊಬ್ಬ ಸಿನಿಕ ಅನ್ನಿಸಿ, ಮಲ್ಲಿಕಾ ಅವತ್ತು ತನ್ನನ್ನು ಸಿನಿಕ ಅಂದಿದ್ದು ಕೂಡ ಸರಿಯೆನ್ನಿಸಿತು. 'ನೀವು ಸೂಕ್ಷ್ಮವಾಗಿದ್ದರೆ ಒಂದು ನಿಜವಾದ ವಿಮರ್ಶೆ ಎಷ್ಟೋ ದಿನಗಳ ಮೇಲಾದರೂ ನಿಮಗೆ ಸತ್ಯ ಅನ್ನಿಸುತ್ತೆ! ಅಲ್ವಾ ಸಾರ್!' ಎಂದು ಒಮ್ಮೆ ಪ್ರೊಫೆಸರ್ ಕೀರಂ ನಾಗರಾಜ್ ಹುಬ್ಬು ಕುಣಿಸುತ್ತಾ ಹೇಳಿದ್ದು ನೆನಪಾಯಿತು. ಅಲ್ಲಿ ಇಲ್ಲಿ ತಡಕಿದ ಮೇಲೆ ರಮೇಶನಿಗೆ ಹೃತಿಕ್–ಸುಸೇನ್ ಬಗ್ಗೆ ಇಷ್ಟು ವಿವರಗಳು ಸಿಕ್ಕವು: ಇಪ್ಪತ್ತು ವರ್ಷಗಳ ಕೆಳಗೆ ಮದುವೆಯಾದ ಹೃತಿಕ್ ರೋಷನ್–ಸುಸೇನ್ ಖಾನ್, ಯಾವಯಾವುದೋ ಕಾರಣಗಳಿಂದ ಆರು ವರ್ಷಗಳ ಕೆಳಗೆ ಬೇರೆಯಾಗಿ ದುಡ್ಡು ಕಾಸು ಎಲ್ಲ ಸೆಟ್ಲ್ ಆದ ಮೇಲೆ ಬೇರೆ ಬೇರೆ ಮನೆಗಳಲ್ಲಿ ವಾಸವಾಗಿದ್ದರು; ಅದಾದ ಮೇಲೂ ಆಗಾಗ್ಗೆ ಭೇಟಿ ಮಾಡಿ, ಮಕ್ಕಳ ಜೊತೆ ಸಿನಿಮಾ ನೋಡಿ, ಮತ್ತೆ ತಂತಮ್ಮ ಮನೆಯಲ್ಲಿ ತಾವಿದ್ದರು. ಈಗ ಕೊರೊನಾ ಲಾಕ್‌ಡೌನ್ ಆದ ಮೇಲೆ ಒಂದೇ ಸೂರಿನಡಿ ಬಂದಿದ್ದರು. ಈ ಹೊಸ ಹೊಂದಾಣಿಕೆ ಎಷ್ಟು ಕಾಲದ ಮಟ್ಟಿಗೆ ನಡೆಯಬಹುದು ಎಂಬುದರ ಬಗೆಗಾಗಲೀ, ಮಿಕ್ಕ ವಿವರಗಳ ಬಗೆಗಾಗಲೀ ರಮೇಶನಿಗೆ ಕುತೂಹಲವಿರಲಿಲ್ಲ.

## 6

ಇದ್ದ ಕೆಲಸವನ್ನು ಇದ್ದಕ್ಕಿದ್ದಂತೆ ಬಿಟ್ಟು ಮುಂದಿನ ಹೆಜ್ಜೆಯ ಬಗ್ಗೆ ಯಾವ ಸ್ಪಷ್ಟತೆಯೂ ಇಲ್ಲದ ರಮೇಶ್ ರೆಡ್ಡಿ ಒಂದು ಬಗೆಯ ಅಬ್ಬೇಪಾರಿ ನಿರಾಳತೆಯಲ್ಲಿದ್ದ ಕಾಲದಲ್ಲಿ ಡಾ. ರಾಮಾನಾಯಕ್ ಇದ್ದಕ್ಕಿದ್ದಂತೆ ಫೋನ್ ಮಾಡಿ, 'ಲಾಕ್‌ಡೌನ್ ಟೈಮಲ್ಲಿ ಏನು ಮಾಡ್ತಿದೀಯಪ್ಪ? ನಮ್ಮನೇಲಿ ಒಳ್ಳೇ ಸ್ಕಾಚ್ ಇದೆ, ಬಾ!' ಅಂದರು. ಹೀಗೇ ಮಾತಿನ ನಡುವೆ, 'ಅದೇ... ಆ ನಟಿ ರಂಜಿತಾ ಸೇನ್ ಕತೆ ನೀನು ಅರ್ಥ ಮಾಡಿಕೊಳ್ಳಲೇಬೇಕಾದ ಕತೆ; ಫ್ರೀ ಆದಾಗ ಮನೇ ಕಡೆಗೋ, ನರ್ಸಿಂಗ್ ಹೋಮ್ ಕಡೆಗೋ ಬಾ. ಮಾತಾಡೋಣ' ಎಂದರು. 'ರಂಜಿತಾ ನಮ್ಮಲ್ಲಿರುವುದನ್ನು ಎಲ್ಲೂ ಹೇಳಬೇಡ' ಎಂದು ಡಾಕ್ಟರು ಒತ್ತಿ ಹೇಳಿದ್ದನ್ನು ನೆನಸಿಕೊಳ್ಳುತ್ತಾ, ಕುತೂಹಲದಿಂದ ನರ್ಸಿಂಗ್ ಹೋಂ ಕಡೆ ಹೊರಟ ರಮೇಶ್ ರೆಡ್ಡಿಗೆ, ಗೆಳತಿ ರಂಜಿತಾಳನ್ನು ಹುಡುಕಿಕೊಂಡು ಮಲ್ಲಿಕಾ ಅಲ್ಲಿಗೆ ಹೋಗಿರಬಹುದೆಂಬ ಅನುಮಾನವೇನೋ ಸುಳಿದಿತ್ತು; ಆದರೆ ಅವಳು ಹೀಗೆ ರಂಜಿತಾ ರೂಮಿನಲ್ಲೇ ಕೇರ್ ಟೇಕರ್ ಥರ ಕೂತಿರಬಹುದೆಂದು ಮಾತ್ರ ಅವನು ಊಹಿಸಿರಲಿಲ್ಲ!

ರಂಜಿತಾಸೇನ್ ಇದ್ದ ತೀರಾ ಪ್ರೈವೇಟ್ ಆದ ಸ್ಪೆಷಲ್ ವಾರ್ಡಿಗೆ ರಾಮಾನಾಯಕ್ ಜೊತೆ ಹೋದ ರಮೇಶನಿಗೆ, ಅಲ್ಲಿ ಮಲ್ಲಿಕಾ ಕೂತಿದ್ದನ್ನು ಕಂಡ ತಕ್ಷಣ ಇದೆಲ್ಲ ರಾಮಾನಾಯಕರ ಏರ್ಪಾಡೇ ಇರಬಹುದು ಅನ್ನಿಸಿತು! ಮಲ್ಲಿಕಾಳ ಮಗುಮುಖ ನೋಡಿದ ತಕ್ಷಣ, ಹಿಂದೆ ಯಾವಾಗಲೂ ಆಗುತ್ತಿದ್ದಂತೆ ಅವಳ ಜೊತೆಗಿನ ಜಗಳವೆಲ್ಲ ಮರೆತೇ ಹೋಗಿ, 'ಅರೆ! ದಾರೀಲಿ ಅಂದುಕೊಂತಾಲೇ ಇದ್ದೆ– ನಿನ್ನ ಫ್ರೆಂಡ್ ನೋಡೋಕೆ ಇಲ್ಲಿಗೆ ಹೋಗ್ತೀಯ ಅಂತ!' ಅಂದ. ಅವನ ಎಂದಿನ ಬಿಡುಬೀಸಾದ ಧಾಟಿಯ ಮಾತಿನಿಂದ ಮಲ್ಲಿಕಾಗೆ ಆರಾಮೆನ್ನಿಸಿತು. ಇತ್ತೀಚೆಗೆ ತಾನೂ ಅವನಂತೆಯೇ ಕೆಲಸ ಬಿಡುವ ಹಂತಕ್ಕೆ ಹೋಗಿರುವುದನ್ನು ಈಗಿಂದೀಗಲೇ ಅವನಿಗೆ ಹೇಳಬೇಕೆನ್ನಿಸಿತು.

ರಂಜಿತಾಗೆ, 'ಸ್ಪೀಡಿ ರಿಕವರಿ' ಹೇಳಿದ ರಮೇಶ್, ಒಂದೆರಡು ನಿಮಿಷ ಪೇಪರ್ ತಿರುವಿ ಹಾಕುತ್ತಾ ಅಲ್ಲೇ ಕೂತ. ರಂಜಿತಾ ಜೊತೆ ಮಾತಾಡುತ್ತಲೇ ಮಲ್ಲಿಕಾ ಒಮ್ಮೆ ಎಡಕ್ಕೆ ತಿರುಗಿ ಕಿರುಗಣ್ಣಲ್ಲೇ ಅವನನ್ನು ಗಮನಿಸಿದಳು: ಕೆಲಸ ಬಿಟ್ಟ ಮೇಲೆ ಯಾವುದೇ ಜವಾಬ್ದಾರಿ, ಒತ್ತಡಗಳಿಲ್ಲದ ನಿರಾಳ ಮುಖ... ನಾನೂ ಈ ಕೆಲಸ ಬಿಟ್ಟರೆ ನನ್ನ ಮುಖವೂ ಇಷ್ಟೇ ನಿರಾಳವಾಗಿರಬಹುದು ಅನ್ನಿಸಿ, ಆದಷ್ಟು ಬೇಗ ಅವನ ಈ ಬುದ್ಧಸ್ಥಿತಿಗೆ ತಾನೂ ತಲುಪಬೇಕು ಅಂದುಕೊಂಡಳು. ರಮೇಶ್ 'ಕೆಳಗಿರ್ತೀನಿ' ಎನ್ನುತ್ತಾ ಮೇಲೆದ್ದು, ಮೆಟ್ಟಲಿಳಿದು ರಿಸೆಪ್ಷನ್ನಿಗೆ ಬಂದು ಟೇಬಲ್ ಮೇಲಿದ್ದ ಪೇಪರ್ ಹಿಡಿದು